Time : 3 hours | Maximum Marks : 250

ಸಮಯ : 3 ಗಂಟೆಗಳು | ಗರಿಷ್ಠ ಅಂಕಗಳು: 250

# 26(c)/1-Kannada 1

## SECTION—A / ವಿಭಾಗ—A

1.(a) ಭಾಷೆ ಎಂದರೇನು? ಭಾಷೆಯ ಸ್ವರೂಪ, ಸ್ವಭಾವ ಹಾಗೂ ವೈಶಿಷ್ಟ್ಯಗಳನ್ನು ವಿವರಿಸಿ. [25 Marks]

1.(b) ಕನ್ನಡ ಭಾಷೆಯ ವಿವಿಧ ಕಾಲಘಟ್ಟಗಳು ಮತ್ತು ಆಯಾ ಕಾಲಘಟ್ಟಗಳಲ್ಲಿನ ವಿಶೇಷ ರೂಪಭೇದಗಳನ್ನು ವಿಶದಪಡಿಸಿ. [25 Marks]

2.(a) ವಿಭಕ್ತಿ ಎಂದರೇನು? ದ್ರಾವಿಡ ಭಾಷೆಗಳ ವಿಭಕ್ತಿ ವ್ಯವಸ್ಥೆಯ ಸ್ವರೂಪವನ್ನು ವಿವರಿಸಿ. [25 Marks]

2.(b) ಕನ್ನಡ ಮತ್ತು ಇತರ ದ್ರಾವಿಡ ಭಾಷೆಗಳಲ್ಲಿರುವ ವ್ಯತ್ಯಾಸಗಳು, ವೈರುಧ್ಯಗಳು ಮತ್ತು ಗುಣಲಕ್ಷಣಗಳನ್ನು ಕೂಲಂಕಷವಾಗಿ ಚರ್ಚಿಸಿ. [25 Marks]

3.(a) ವಡ್ಡಾರಾಧನೆ ಮತ್ತು ಚಾವುಂಡರಾಯ ಪುರಾಣಗಳ ಹಿನ್ನೆಲೆಯಲ್ಲಿ ಹಳೆಗನ್ನಡ ಗದ್ಯ ಸಾಹಿತ್ಯದ ಮಹತ್ವವನ್ನು ವಿಶ್ಲೇಷಿಸಿ. [25 Marks]

3.(b) ರನ್ನನ ಗದಾಯುದ್ಧದ ವೈಶಿಷ್ಟ್ಯಗಳನ್ನು ಕುರಿತು ವಿವರಿಸಿ. [25 Marks]

4. ನಡುಗನ್ನಡದ ಪ್ರಮುಖ ಕವಿಗಳು ಮತ್ತು ಕೃತಿಗಳ ಹಿನ್ನೆಲೆಯಲ್ಲಿ ಷಟ್ಪದಿ ಸಾಹಿತ್ಯದ ವೈಶಿಷ್ಟ್ಯಗಳನ್ನು ಪರಿಚಯಿಸಿ. [50 Marks]

## SECTION—B / ವಿಭಾಗ—B

5.(a) ಅಲಂಕಾರ, ಗುಣ, ರೀತಿ ಪಂಥಗಳು ಪ್ರತಿಪಾದಿಸಿರುವ ಕಾವ್ಯ ಮೀಮಾಂಸೆಯ ಚಿಂತನೆಗಳನ್ನು ವಿವರಿಸಿ. [25 Marks]

5.(b) ಸೃಷ್ಟಿಕಾರ್ಯ ಮತ್ತು ಅನುಸೃಷ್ಟಿಕಾರ್ಯಗಳು ಕಾವ್ಯದ ಯಶಸ್ಸಿಗೆ ಹೇಗೆ ಸಹಕಾರಿಯಾಗಿವೆ? ಚರ್ಚಿಸಿ. [25 Marks]

6.(a) ಭಾರತೀಯ ಕಾವ್ಯಮೀಮಾಂಸೆ ಮತ್ತು ಕನ್ನಡ ವಿಮರ್ಶೆಯ ಸಂಬಂಧಾಂತರಗಳನ್ನು ನಿದರ್ಶನಾತ್ಮಕವಾಗಿ ವಿಮರ್ಶಿಸಿ. [25 Marks]

6.(b) ಕಾವ್ಯ ರಚನೆಯಲ್ಲಿ ಪ್ರತಿಭೆ ಮತ್ತು ವ್ಯುತ್ಪತ್ತಿಗಳ ಕಾರ್ಯ ಮತ್ತು ಮಹತ್ವವನ್ನು ವ್ಯಾಖ್ಯೆಗಳೊಂದಿಗೆ ವಿವರಿಸಿ. [25 Marks]

7.(a) ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ಪ್ರಾಚೀನತೆಯನ್ನು ಕುರಿತು ಬರೆಯಿರಿ. [25 Marks]

7.(b) ರಾಷ್ಟ್ರಕೂಟರು ಕನ್ನಡ ನಾಡಿಗೆ ನೀಡಿದ ಕೊಡುಗೆಗಳನ್ನು ವಿವರಿಸಿ. [25 Marks]

8. ಕರ್ನಾಟಕದ ಸಾಮಾಜಿಕ ಸ್ಥಿತಿಗತಿಗಳ ಮೇಲೆ ಧಾರ್ಮಿಕ ಚಳುವಳಿಗಳು ಬೀರಿದ ಪರಿಣಾಮಗಳನ್ನು ಚರ್ಚಿಸಿ. [50 Marks]

**Time : 3 hours** | **Maximum Marks : 250**

**ಸಮಯ : 3 ಗಂಟೆಗಳು** | **ಗರಿಷ್ಠ ಅಂಕಗಳು: 250**

# 26(c)/II-Kannada 2

## SECTION—A / ವಿಭಾಗ—A

**1.(a)** ಆದಿಪುರಾಣದ ವಸ್ತು ಮತ್ತು ರೂಪಗಳಿಗೆ ಇರುವ ಅರ್ಥಪೂರ್ಣ ಸಂಬಂಧವನ್ನು ವಿಶ್ಲೇಷಿಸಿ.

**[25 Marks]**

**1.(b)** ಪಂಪ ವಿಕ್ರಮಾರ್ಜುನ ವಿಜಯಂನಲ್ಲಿ ಚಿತ್ರಿಸಿರುವ ರಾಜತಾಂತ್ರಿಕ ಕೌಶಲದ ಸೂಕ್ಷ್ಮವನ್ನು ವಿಶ್ಲೇಷಿಸಿ.

**[25 Marks]**

**2.** ನಿಮಗೆ ಪಠ್ಯವಾಗಿರುವ ಆದಿಪುರಾಣ ಮತ್ತು ಪಂಪಭಾರತಗಳ ಯುದ್ಧ ಸನ್ನಿವೇಶಗಳನ್ನು ಪರಸ್ಪರ ಹೋಲಿಸಿ. ಅದರಲ್ಲಿ ಕಾಣುವ ಪಂಪನ ವಿಶಿಷ್ಟ ಸಂವೇದನೆಯನ್ನು ಗುರುತಿಸಿ. **[50 Marks]**

**3.(a)** ಬಸವರಾಜ ದೇವರ ರಗಳೆ ಕೃತಿಯ ಆಶಯವನ್ನು ತಿಳಿಸಿ. **[25 Marks]**

**3.(b)** ಪರಮಾರ್ಥ ಕೃತಿಯಲ್ಲಿ ಅಭಿವ್ಯಕ್ತಗೊಳ್ಳುವ ವೈಚಾರಿಕ ಅಂಶಗಳಾವುವು? ವಿವರಿಸಿ. **[25 Marks]**

**4.(a)** ಕೃಷ್ಣನ ಸಂಧಾನದ ವೈಫಲ್ಯಕ್ಕೆ ಕಾರಣವಾದ ಅಂಶಗಳಾವುವು? ಉದ್ಯೋಗ ಪರ್ವದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

**[25 Marks]**

**4.(b)** ಭರತನ ವ್ಯಕ್ತಿತ್ವದ ವೈಭವೀಕರಣ 'ಭರತೇಶ ವೈಭವ' ದಲ್ಲಿ ಮೂಡಿರುವ ಬಗೆಯನ್ನು ವಿಶದಪಡಿಸಿ.

**[25 Marks]**

## SECTION—B / ವಿಭಾಗ—B

**5.(a)** 'ಅಶ್ವತ್ಥಾಮನ್' ನಾಟಕದ ಮೂಲಕ ಬಿ.ಎಂ.ಶ್ರೀ ಅವರು ಪಾಶ್ಚಾತ್ಯ ಮತ್ತು ಪೌರ್ವಾತ್ಯ ಪರಂಪರೆಗಳನ್ನು ಅನುಸಂಧಾನಗೊಳಿಸುವ ಕ್ರಮವನ್ನು ವಿಶ್ಲೇಷಿಸಿ. **[25 Marks]**

**5.(b)** ಕನ್ನಡ ನವ್ಯ ಕಾವ್ಯದಲ್ಲಿನ ಹೆಣ್ಣಿನ ಪ್ರತಿನಿಧೀಕರಣದ ಸ್ವರೂಪವನ್ನು 'ಸಂಕ್ರಮಣ ಕಾವ್ಯ; ಪ್ರಾತಿನಿಧಿಕ ನವ್ಯ ಕವನಗಳ ಸಂಕಲನ' ಎಂಬ ಕೃತಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿ. **[25 Marks]**

**6.** ಶಿವರಾಮ ಕಾರಂತರ ಚೋಮನ ದುಡಿ ಕಾದಂಬರಿಯು ದಲಿತರ ಭೂಮಿಹಕ್ಕಿನ ಪ್ರಶ್ನೆಯನ್ನು ನಿರ್ವಹಿಸುವ ಕ್ರಮವನ್ನು ಚರ್ಚಿಸಿ. **[50 Marks]**

**7.(a)** ಪಾತಿವ್ರತ್ಯದ ಕಲ್ಪನೆ 'ಗರತಿಯ ಗರಿಮೆ' ಯಲ್ಲಿ ಪಡೆಒಡೆದಿರುವ ಬಗೆಯನ್ನು ಕುರಿತು ಬರೆಯಿರಿ.

**[25 Marks]**

**7.(b)** 'ಸಾಹಿತ್ಯ ವೃಕ್ಷಕ್ಕೆ ಜನಪದ ಕಾವ್ಯ ಬೊಡ್ಡೆ–ಬೇರು; ಅಭಿಜಾತ ಕಾವ್ಯ ಹೂ–ಹಣ್ಣು' ಚರ್ಚಿಸಿ.

**[25 Marks]**

**8.(a)** 'ಒಗಟು ಹಳ್ಳಿಯ ಬಾಳಿನ ಸಾರಿಗೆ ಹಾಕಿದ ಒಗ್ಗರಣೆ; ಹಾರಿಸಿದ ಚಟಾಕಿ' ಚರ್ಚಿಸಿ. **[25 Marks]**

**8.(b)** ಗಾದೆಗಳ ಸ್ವರೂಪ, ಲಕ್ಷಣ ಹಾಗೂ ಅವುಗಳ ವರ್ಗೀಕರಣವನ್ನು ಸಾಂದರ್ಭಿಕವಾಗಿ ಚರ್ಚಿಸಿ.

**[25 Marks]**